# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:** 618
**ಸದಸ್ಯರ ಹೆಸರು** : ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
**ಉತ್ತರಿಸುವ ದಿನಾಂಕ** : 19.09.2022
**ಉತ್ತರಿಸುವ ಸಚಿವರು** : ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಓಲ, ಊಬರ್, ಅರ್ಬನ್ ಕ್ಲಾಪ್ ನಂತಹ ಸೇವೆ ನೀಡುವ ಸಂಸ್ಥೆಗಳ ಚಾಲಕರು, ಸಿಬ್ಬಂದಿಗಳು ಬಹುತೇಕ ಕನ್ನಡೇತರರಾಗಿದ್ದು, ಇದರಿಂದ ರಾಜ್ಯದ ಸಾಮಾನ್ಯ ಕನ್ನಡಿಗರಿಗೆ ಸಂವಹನದಲ್ಲಿ ಸಮಸ್ಯೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಸಂಸ್ಥೆಗಳ ನೌಕರರಿಗೆ ಸಾರ್ವಜನಿಕರೊಂದಿಗೆ ಕನಿಷ್ಠ ಕನ್ನಡ ಭಾಷೆಯ ಸಂವಹನ ಜ್ಞಾನ ಹೊಂದುವ ಬಗ್ಗೆ ಕಂಪೆನಿಗಳೇ ಖಚಿತ ಪಡಿಸಿ ಅಥವಾ ಕಂಪನಿಗಳ ವತಿಯಿಂದಲೇ ಕನ್ನಡ ಸಂವಹನ ತರಬೇತಿ ನೀಡಿದ ಬಳಿಕ ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸಲು ಅನುವು ಮಾಡಿಕೊಡುವ ಕುರಿತು ಸರ್ಕಾರದ ನಿಲುವೇನು; | ಓಲ, ಊಬರ್, ಅರ್ಬನ್ ಕ್ಯಾಬ್ ನಂತಹ ಸಾರಿಗೆ ಸೇವೆ ನೀಡುವ ಸಂಸ್ಥೆಗಳ ಚಾಲಕರು, ಸಿಬ್ಬಂದಿಗಳು ಬಹುತೇಕ ಕನ್ನಡೇತರರಾಗಿರುವುದರಿಂದ ರಾಜ್ಯದ ಸಾಮಾನ್ಯ ಕನ್ನಡಿಗರಿಗೆ ಸಂವಹನದಲ್ಲಿ ಸಮಸ್ಯೆಯಾಗಿರುವ ಕುರಿತು ಯಾವ ಮನವಿ/ದೂರುಗಳು ಸ್ವೀಕೃತವಾಗಿರುವುದಿಲ್ಲ.<br><br>ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ರಾಜ್ಯದಲ್ಲಿ ಸಾರಿಗೆ ವ್ಯವಸ್ಥೆ ನೀಡುತ್ತಿರುವ ಸರ್ಕಾರಿ/ಖಾಸಗಿ ಸಂಸ್ಥೆಗಳಿಗೆ ಸಾರಿಗೆ ವಲಯದಲ್ಲಿ ಕನ್ನಡ ಜಾಗೃತಿ ಮೂಡಿಸಲು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ 2021ರ ಆಗಸ್ಟ್ ತಿಂಗಳ 23, 24, 25 ರಂದು ರಾಜ್ಯಾದ್ಯಂತ ಕನ್ನಡ ಅಭಿಯಾನವನ್ನು ನಡೆಸಲಾಗಿದೆ. |
| ಆ) | ಕನ್ನಡ ಬಾರದ ಅಥವಾ ಕನ್ನಡ ಕಲಿಸದ ಆಪ್ ಆಧಾರಿತ ಕಂಪನಿಗಳು ರಾಜ್ಯದಲ್ಲಿ ಸೇವೆ ನೀಡುವ ಸಂದರ್ಭದಲ್ಲಿ ತನ್ನ ನೌಕರರಿಗೆ ಕನ್ನಡ ಭಾಷೆಯ ಸಂವಹನ ಜ್ಞಾನದ ತರಬೇತಿ ನೀಡದೇ ಇದ್ದಲ್ಲಿ, ಅಂತಹ ಕಂಪನಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗುತ್ತದೆ; | ಮೇಲಿನ ಉತ್ತರದ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ. |
| ಇ) | ಬೆಂಗಳೂರು ನಗರ ವ್ಯಾಪ್ತಿಯಲ್ಲಿನ ಬಹುತೇಕ ವಸತಿ ಸಂಕೀರ್ಣಗಳಲ್ಲಿ ಅನ್ಯ ರಾಜ್ಯದವರೇ ಬಹುಸಂಖ್ಯಾತರಾಗಿರುವ ಕಾರಣಕ್ಕಾಗಿ ಸದರಿ ಕಟ್ಟಡಗಳ ಸೆಕ್ಯೂರಿಟಿ ಹಾಗೂ ಇತರ ಕೆಳಹಂತದ ಸಿಬ್ಬಂದಿಗಳಾಗಿ ಕನ್ನಡ ಭಾಷೆಯ ಬಗ್ಗೆ ತಿರಸ್ಕಾರ ಇರುವಂತಹ ವ್ಯಕ್ತಿಗಳನ್ನೇ ನೇಮಕ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರದ ನಿಲುವೇನು; | ಇಂತಹ ಬೆಳವಣಿಗೆಗಳ ಕುರಿತು ಯಾವುದೇ ಮನವಿ/ದೂರುಗಳು ಸ್ವೀಕೃತವಾಗಿರುವುದಿಲ್ಲ. |

| | | |
|---|---|---|
| ಈ) | ಬೆಂಗಳೂರು ನಗರದ ಹಲವಾರು ವಸತಿ ಸಂಕೀರ್ಣಗಳಲ್ಲಿ ಮೂಲತಃ ಬೆಂಗಳೂರಿಗರು ಭೇಟಿ ನೀಡುವ ಸಂದರ್ಭದಲ್ಲಿ ಕನ್ನಡ ಹೊರತುಪಡಿಸಿ ಅನ್ಯ ಭಾಷೆಗಳಲ್ಲಿ ವ್ಯವಹರಿಸಬೇಕಾಗಿರುವ ಅನಿವಾರ್ಯತೆ ಕರ್ನಾಟಕ ರಾಜ್ಯದ ರಾಜಧಾನಿಯಲ್ಲಿ ನಿರ್ಮಾಣವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಈ ಕುರಿತು ಸರ್ಕಾರದ ನಿಲುವೇನು; ಈ ವಸತಿ ಸಂಕೀರ್ಣಗಳಲ್ಲಿ ಕನಿಷ್ಠ ಒಬ್ಬ ಕನ್ನಡ ಬಲ್ಲ ವ್ಯಕ್ತಿಯ ನೇಮಕ ಕಡ್ಡಾಯ ಕುರಿತು ಸರ್ಕಾರ ಯಾವ ಕ್ರಮ ಕೈಗೊಂಡಿದೆ; | ಇಂತಹ ಬೆಳವಣಿಗೆಗಳ ಕುರಿತು ಸರ್ಕಾರಕ್ಕೆ ಯಾವುದೇ ಮನವಿ/ದೂರುಗಳು ಸ್ವೀಕೃತವಾಗಿರುವುದಿಲ್ಲ.<br><br>ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವ್ಯಾಪ್ತಿಯಡಿ ಕಾರ್ಯನಿರ್ವಹಿಸುತ್ತಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಆಸಕ್ತ ಕನ್ನಡೇತರರಿಗೆ ಕನ್ನಡ ಕಲಿಕಾ ಶಿಬಿರಗಳನ್ನು ನಡೆಸಲಾಗುತ್ತಿರುತ್ತದೆ. |
| ಉ) | ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಬೆಂಗಳೂರು ನಗರದ ವಸತಿ ಸಂಕೀರ್ಣಗಳಲ್ಲಿ ಕನ್ನಡ ಭಾಷೆಯ ಅನಿವಾರ್ಯತೆ ಕುರಿತು ಅರಿವು ಮೂಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಬಹುಮಹಡಿ ವಸತಿ ಸಂಕೀರ್ಣ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಕನ್ನಡ ಭಾಷೆ ಬಲ್ಲವರೇ ಆಗಬೇಕು ಎಂಬುದರ ಕುರಿತು ಕಾನೂನು ತರಲು ಸರ್ಕಾರ ಕೈಗೊಂಡ ಕ್ರಮಗಳೇನು; ಕನ್ನಡ ಭಾಷೆ ಬಾರದ ಪದಾಧಿಕಾರಿಗಳನ್ನು ಹೊಂದಿರುವ ವಸತಿ ಸಂಕೀರ್ಣ ಸೊಸೈಟಿಗಳ ಮೇಲೆ ದಂಡ ವಿಧಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ವಿವರ ನೀಡುವುದು) | ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಬಹುಮಹಡಿ ವಸತಿ ಸಂಕೀರ್ಣಗಳಲ್ಲಿ ಕನಿಷ್ಠ ಕನ್ನಡ ಬಲ್ಲ ಒಬ್ಬ ವ್ಯಕ್ತಿಯ ನೇಮಕ ಹಾಗೂ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಕನ್ನಡ ಭಾಷೆ ಬಲ್ಲವರೇ ಆಗಬೇಕು ಎಂಬುದರ ಕುರಿತು ಯಾವುದೇ ಕಾಯ್ದೆ/ನಿಯಮಗಳು ಇರುವುದಿಲ್ಲ, ಮುಂದಿನ ದಿನಗಳಲ್ಲಿ ಈ ಬಗ್ಗೆ ಪರಿಶೀಲಿಸಲಾಗುವುದು. |

ಸಂಖ್ಯೆ.ಕಸಂವಾ/130/ಕೆಎಲ್ ಆಕ/2022

(ವಿ.ಸುನೀಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು